ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಹೊಸದುರ್ಗ

ಓ.ಎಸ್ **.01/2018**
ಡಿ.ಡಬ್ಲೂ. **02**

ದಿನಾಂಕ.**08.12.2022.**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು: ಶ್ರೀ.ಎಸ್ಎಮ್.., ವಕೀಲರಿಂದ ವಾದಿಯ ಪರವಾಗಿ:

1. ನಿಮ್ಮ ಅಜ್ಜ ರುದ್ರಪ್ಪ ಯಾರಿಂದ ಎಷ್ಟು ಎಕರೆ ಜಮೀನನ್ನು ಖರೀದಿಸಿರುತ್ತಾರೆ ಎಂದು ಸೂಚಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ನಾನು ಹುಟ್ಟೇ ಇರಲಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಅಜ್ಜನಿಗೆ ಒಟ್ಟು ಎಷ್ಟು ಎಕರೆ ಜಮೀನು ಇತ್ತು ಎಂದು ಪ್ರಶ್ನಿಸಲಾಗಿ ಸಾಕ್ಷಿಯು 15 ಎಕರೆ 39 ಗುಂಟೆ ಎಂದು ನುಡಿಯುತ್ತಾರೆ. 16 ಎಕರೆ 36 ಗುಂಟೆ ಜಮೀನು ಇತ್ತು ಎನ್ನುವುದು ಸರಿಯಲ್ಲ. ಸರ್ವೆ ನಂ. 38 ನಿಮ್ಮ ದೊಡ್ಡಪ್ಪ ಸಿದ್ದಪ್ಪನ ಹೆಸರಿಗೆ ಖಾತೆ ವರ್ಗಾವಣೆ ಆಗಿದ್ದು ಯಾವಾಗ ಆಯಿತು ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ನಿಮ್ಮ ಅಜ್ಜ ರುದ್ರಪ್ಪನ ಮೂವರು ಮಕ್ಕಳು ಯಾವಾಗ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿಯು 1930ರಲ್ಲಿ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಅಜ್ಜ ರುದ್ರಪ್ಪ ಮರಣ ಹೊಂದಿದ ನಂತರ ಒಟ್ಟು ಕುಟುಂಬದಲ್ಲಿದ್ದ ಕಾರಣ ಅವರ ಹಿರಿಯ ಮಗ ಸಿದ್ದಪ್ಪನಿಗೆ ಪೌತಿ ಖಾತೆಯಾಗಿರುತ್ತದೆ ಎನ್ನುವುದು ಸರಿ. 1961-62ರಲ್ಲಿ ಮೀನಾಕ್ಷಿ ವಾಟರ್ ವರ್ಕ್ಸ್ ಗೆ ಜಾಗ ಸಿದ್ದಪ್ಪನವರಿಂದಲೇ ಜಾಗ ವರ್ಗಾವಣೆ ಆಗಿದೆ ಎನ್ನುವುದ ಸರಿ, ಸಾಕ್ಷಿ ಮುಂದುವರೆದು ನಮ್ಮ ತಂದೆಯ ಭಾಗಕ್ಕೆ ಬಂದ ಜಮೀನು ಸಿದ್ದಪ್ಪನ ಹೆಸರಿನಲ್ಲಿಯೇ ಖಾತೆ ಇದ್ದ ಕಾರಣ ಅವರೇ ವರ್ಗಾವಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ನಮ್ಮ ತಂದೆಯಿಂದ ಜಮೀನು ಮೀನಾಕ್ಷಿ ವಾಟರ್ ವರ್ಕಸ್ ಗೆ ಜಾಗ ಹೋದ ಬಗ್ಗೆ ಯಾವುದೇ ದಾಖಾಲಾತಿಗಳು ಇರುವುದಿಲ್ಲ. ನಮ್ಮ ತಂದೆಯ ಭಾಗಕ್ಕೆ ಮೀನಾಕ್ಷಿ ವಾಟರ್ ವರ್ಕಸ್ ಗೆ ನೀಡಿದ ಜಾಗ ಬಂದಿತ್ತು ಎಂದು ತೋರಿಸಲು ಲಿಖಿತವಾದ ದಾಖಲೆ ಇರುತ್ತವೆ. 1960-61 ರಲ್ಲಿ ನಮ್ಮ ಒಟ್ಟು ಕುಟುಂಬಕ್ಕ ಸರ್ವೆ ನಂ. 16 ರಲ್ಲಿ 04 ಎಕರೆ ಜಮೀನು ಮಂಜೂರು ಆಯಿತು ಎನ್ನುವುದು ಸರಿಯಲ್ಲ. ಸದರಿ ಜಮೀನು 01 ನೇ ಪ್ರತಿವಾದಿಗೆ ಮಂಜೂರಾಯಿತು ಎಂದು ಸೂಚಿಸಲಾಗಿ ಸಾಕ್ಷಿಯು ಅವರು ಅರ್ಜಿ ಕೊಟ್ಟಿರುತ್ತಾರೆ ಹಾಗಾಗಿ ಆಗಿರುತ್ತದೆ ಎಂದು ನುಡಿಯುತ್ತಾರೆ.

4. ಮೃತ ವಾದಿ ಶಿವರುದ್ರಪ್ಪನ ಅಂತ್ಯ ಸಂಸ್ಕಾರಕ್ಕೆ ನೀವು ಹೋಗಿರಲಿಲ್ಲ ಎಂದು ಸೂಚಿಸಲಾಗಿ ಸಾಕ್ಷಿಯು ನಮಗೂ ಅವರಿಗೂ ಆಗುವುದಿಲ್ಲ ಹಾಗಾಗ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. 1930 ರಲ್ಲಿ ಪಾಲು ವಿಭಾಗ ಆದ ದಾಖಾಲೆಗಳನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಎನ್ನುವುದು ಸರಿಯಲ್ಲ. 1930 ರಲ್ಲಿ ಪಾಲು ವಿಭಾಗ ಆಗಿರಲಿಲ್ಲ ಈ ಕಾರಣವೇ ನಮ್ಮ ಅಜ್ಜ ರುದ್ರಪ್ಪ ಮರಣ ಹೊಂದಿದ ನಂತರ ಆತನ ಹಿರಿಯ ಮಗ ಸಿದ್ದಪ್ಪನಿಗೆ ಖಾತೆ ವರ್ಗಾವಣೆ ಆಯಿತು ಎನ್ನುವುದು ಸರಿಯಲ್ಲ.

5. ಒಟ್ಟು ಕುಟುಂಬದಲ್ಲಿ ಇದ್ದಾಗಲೇ ಮೀನಾಕ್ಷಿ ವಾಟರ್ ವರ್ಕಸ್ ಗೆ ಜಾಗ ನೀಡಲಾಗಿದೆ ಎನ್ನುವುದು ಸರಿಯಲ್ಲ. ಸರ್ಕಾರ ಜಮೀನನ್ನು ವಶಪಡಿಸಿಕೊಂಡ ನಂತರ ಒಟ್ಟು ಕುಟುಂದಲ್ಲಿ ಇದ್ದ ಕಾರಣವೇ 01 ನೇ ಪ್ರತಿವಾದಿಗೆ ಜಾಗವನ್ನು ಮಂಜೂರು ಮಾಡಲಾಗಿದೆ ಎನ್ನುವುದು ಸರಿಯಲ್ಲ. 16 ಎಕರೆ 36 ಗುಂಟೆ ಪೈಕಿ 20 ಗುಂಟೆ ಜಮೀನನ್ನು 01 ನೇ ಪ್ರತಿವಾದಿಯ ತಂದೆ ಅಲಿನೇಶನ್ ಮಾಡಿಸಿರುತ್ತಾರೆ ಎನ್ನುವುದು ಸರಿ. ಮೃತ ವಾದಿ ಶಿವರುದ್ರಪ್ಪನಿಗೆ ಯಾವ ಭಾಗದಲ್ಲಿ ಮತ್ತು ಯಾವ ಕಡೆ ನಿವೇಶನ ನೀಡಿರುತ್ತೀರಿ ಮತ್ತು ಅದರ ಚೆಕ್ಕುಬಂದಿ ಏನು

ಎಂದು ಪ್ರಶ್ನಿಸಿಲಾಗಿ ಸಾಕ್ಷಿಯು ಪೂರ್ವಕ್ಕೆ ಗಂಗಾಧರಪ್ಪ ಮತ್ತು ಶೇಖರಪ್ಪನ ಜಮೀನು ಪಶ್ಚಿಮ್ಕೆ ರಸ್ತೆ, ಉತ್ತರಕ್ಕೆ ಪ್ರಕಾಶಪ್ಪನ ನಿವೇಶನ, ದಕ್ಷಿಣಕ್ಕೆ ನನ್ನ ಕಾಲಿ ನಿವೇಶನ ಇದ್ದು ಈ ಚೆಕ್ಕುಬಂದಿಗಳ ನಡುವೆ ಇರುವ ನಿವೇಶನವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ಏನಾದರೂ ಖಾತೆ ಬದಲಾವಣೆಯಾದ ಬಗ್ಗೆ ದಾಖಲೆಗಳು ಇವೇಯೇ ಎಂದು ಪ್ರಶ್ನಿಸಿಲಾಗಿ ಸಾಕ್ಷಿಯು ನಾವು ಯಾರು ಖಾತೆ ಬದಲಾವಣೆ ಮಾಡಿಸಿಕೊಂಡಿಲ್ಲ, ಹಿರಿಯಣ್ಣ ಗಂಗಾಧರನ ಹೆಸರಿಗೆ ಇದೆ ಎಂದುನುಡಿಯುತ್ತಾರೆ.

6. ಪಾಲು ವಿಭಾಗ ಆಘದೇ ಇರುವ ಕಾರಣ ಆ 20 ಗುಂಟೆ ಅಲಿನೇಶನ್ ಮಾಡಿಸಿರುವ ಜಾಗ ಈಗಲೂ ಸರ್ಕಾರದ ಹೆಸರಿನಲ್ಲಿ ಇದೆ ಎಂದು ಪ್ರಶ್ನಿಸಿಲಾಗಿ ಸಾಕ್ಷಿಯು ನಾವೇ ಸ್ವಾಧೀನದಲ್ಲಿ ಇರುತ್ತೇವೆ ಸರ್ಕಾರದ ಹೆಸರಿನಲ್ಲಿ ಇಲ್ಲವೆಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವಾಕಾಶ ಕೋರಿರುತ್ತಾರೆ, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಹೊಸದುರ್ಗ

ಓ.ಎಸ್ **.01/2018**
ಡಿ.ಡಬ್ಲೂ. **04**

ದಿನಾಂಕ**.08.12.2022.**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು: ಶ್ರೀ.ಎಸ್‌ಎಮ್.., ವಕೀಲರಿಂದ ವಾದಿಯ ಪರವಾಗಿ:

1. 01 ನೇ ಪ್ರತಿವಾದಿಯ ತಂದೆ ಮನೆ ಕಟ್ಟಲು ಜಾಗವನ್ನು ಅಲಿನೇಶನ್ ಮಾಡಿಸಿದ್ದರು ಈ ವಿಚಾರ ಗೊತ್ತಾ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹುಳಿಯಾರ್ -ಹೊಸದುರ್ಗ ರಸ್ತೆಯ ಕೆಲ್ಲೋಡನ ಉತ್ತರ ದಿಕ್ಕಿನಲ್ಲಿರುವ ನಿವೇಶನಗಳನ್ನು ಯಾರ್ಯಾರು ಯಾವ ರೀತಿ ಹಂಚಿಕೊಂಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೂಲ ಪುರುಷ ರುದ್ರಪ್ಪನ ಮೂವರು ಮಕ್ಕಳು ಪಾಲು ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ</u>

ಓ.ಎಸ್ **.01/2018**
ಡಿ.ಡಬ್ಲೂ. **05**

ದಿನಾಂಕ**.08.12.2022.**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀ ಸವಾಲು: ಶ್ರೀ.ಎಸ್ಎಮ್.., ವಕೀಲರಿಂದ ವಾದಿಯ ಪರವಾಗಿ:</u>

1. ಮೂಲ ಪುರುಷ ರುದ್ರಪ್ಪನವರ ಕುಟುಂಬದಲ್ಲಿ ಯಾವಾಗ ಭಾಗ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಕುಟುಂಬದಲ್ಲಿ ಭಾಗ ಮಾಡಿಕೊಂಡಾಗ ನಾವು ಖುದ್ದಾಗಿ ನಾವು ಇರಲಿಲ್ಲ, ಸಾಕ್ಷಿ ಮುಂದುವರೆದು ಭಾಗ ಮಾಡಿಕೊಂಡು ಬೇರೆ ಬೇರೆ ವಾಸವಾಗಿರುವುದನ್ನು ನಾವು ನೋಡಿರುತ್ತೇವೆ ಎಂದು ನುಡಿದಿರುತ್ತಾರೆ. ರುದ್ರಪ್ಪನ ಮಕ್ಕಳು ವಿಭಾಗ ಮಾಡಿಕೊಂಡಾಗ ಯಾರ್ಯಾರಿಗೆ ಯಾವ ಯಾವ ಜಮೀನು ಹೋಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ.

02. ಮೀನಾಕ್ಷಿ ವಾಟರ್ ವರ್ಕ್ಸ್‌ನ್ನು ಸರ್ಕಾರ ಯಾರಿಂದ ವಶಪಡಿಸಿಕೊಂಡರು ಎಂದು ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಪರಪ್ಪ ಮಾಡಿಕೊಟ್ಟಿರುತ್ತಾರೆ ಎಂದು ಕೇಳಿರುತ್ತೇವೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾವು ದಾಖಾಲೆಗಳನ್ನು ನೋಡಿರುವುದಿಲ್ಲ. ರುದ್ರಪ್ಪನ ಮಕ್ಕಳಿಗೆ ಮೀನಾಕ್ಷಿ ವಾಟರ್ ವರ್ಕ್ಸ್‌ನ್ನು ಸ್ವತ್ತು ಹೇಗೆ ಬಂದಿತ್ತು ಎಂದು ಪ್ರಶ್ನಿಸಲಾಗಿ ಸಾಕ್ಷಿ ಅವರ ಅಜ್ಜನ ಆಸ್ತಿಗಳು ಎಂದು ನುಡಿಯುತ್ತಾರೆ. ಜಮೀನುಗಳ ವಿಚಾರ ಮತ್ತು ರುದ್ರಪ್ಪನ ಮನೆತನದ ವಿಚಾರ ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಒಂದನೇ ಪ್ರತಿವಾದಿಯ ಮಾತು ಕೇಳಿಕೊಂಡು ಭಾಗ ಆಗಿದ್ದಾರೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ

ಓ.ಎಸ್ .01/2018
ಡಿ.ಡಬ್ಲೂ. 03

ದಿನಾಂಕ.08.12.2022.ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು: ಶ್ರೀ.ಎಸ್ಎಮ್.., ವಕೀಲರಿಂದ ವಾದಿಯ ಪರವಾಗಿ:

1. ನಾನು 01 ನೇ ಪ್ರತಿವಾದಿ ಮಲ್ಲಪ್ಪನವರಿಂದ ನಿವೇಶನಗಳನ್ನು ಖರೀದಿಸಿರುತ್ತೇನೆ ಎನ್ನುವುದು ಸರಿ. ಸದರಿ ಎರಡು ನಿವೇಶನಗಳಲ್ಲಿ ಮನೆಯನ್ನು ಕಟ್ಟಿ ಅವುಗಳನ್ನು ನನ್ನ ತಮ್ಮನ ಭಾಗಕ್ಕೆ ಕೊಟ್ಟಿರುತ್ತೇನೆ ಎನ್ನುವುದು ಸರಿ. ಸದರಿ ನಿವೇಶನಗಳನ್ನು ನಾನು 25-30 ವರ್ಷಗಳ ಹಿಂದೆ ಖರೀದಿಸಿರುತ್ತೇನೆ. ಸದರಿ ಎರಡು ನಿವೇಶನಗಳ ನೊಂದಣಿ ಕ್ರಯಪತ್ರವನ್ನು ಒಂದನೇ ಪತ್ರಿವಾದಿಯ ಕಡೆಯಿಂದ ಮಾಡಿಸಿಕೊಂಡಿರುತ್ತೀರಿ ಎಂದು ಸೂಚಿಸಲಾಗಿ ಸಾಕ್ಷಿಯು ಅವರ ತಂದೆಯೂ ಸಹ ಇದ್ದರು ಎಂದು ನುಡಿಯುತ್ತಾರೆ. ಸದರಿ 02 ನಿವೇಶನಗಳು ಒಂದನೇ ಪ್ರತಿವಾದಿಯ ಒಟ್ಟು ಕುಟುಂಬದ ಆಸ್ತಿಗಳು ಎಂದು ಸೂಚಿಸಲಾಗಿ ಸಾಕ್ಷಿಯು ಅವರು ಆಗಲೇ ಬೇರೆಯಾಗಿದ್ದರು ಎಂದು ನುಡಿಯುತ್ತಾರೆ.

02. 01 ನೇ ಪ್ರತಿವಾದಿ ಯಾವಾಗ ಭಾಗ ಮಾಡಿಕೊಂಡಿದ್ದರು ಎಂದು ಗೊತ್ತಿಲ್ಲ. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಪರೀಶೀಲಿಸಿಲ್ಲ. ಸದರಿ 02 ನಿವೇಶನಗಳು 01 ನೇ ಪ್ರತಿವಾದಿಯ ಭಾಗಕ್ಕೆ ಬಂದ ದಾಖಾಲಾತಿಗಳನ್ನು ನಾನು ನೋಡಿರುವುದಿಲ್ಲ, ಸಾಕ್ಷಿ ಮುಂದುರವರೆದು ಪಹಣಿಗಳು ಒಂದನೇ ಪ್ರತಿವಾದಿಯ ಹೆಸರಿನಲ್ಲಿದ್ದು ಖರೀದಿಸಿದ್ದೇವು ಎಂದು ನುಡಿಯುತ್ತಾರೆ. ಪಾಲು ವಿಭಾಗದಲ್ಲಿ 01 ನೇ ಪ್ರತಿವಾದಿ ಮತ್ತು ಅವರ ಕುಟುಂಬಗಳಿಗೆ ಯಾವ್ಯಾವ ಆಸ್ತಿ ಎಷ್ಟು ಹೋಗಿದ್ದವೇ ಎನ್ನುವುದು ನನಗೆ ಗೊತ್ತಿಲ್ಲ. ಪರಪ್ಪ, ರುದ್ರಪ್ಪ ಮತ್ತು ಸಿದ್ದಪ್ಪನ ನಡುವೆ ಭಾಗ ಆದಾಗ ನಾವು ಇರಲಿಲ್ಲ ಮತ್ತು ಈ ಬಗ್ಗೆ ನಮಗೆ ವಿಚಾರ

ಗೊತ್ತಿರುವುದಿಲ್ಲ.

3. ಪ್ರತಿವಾದಿಯ ಒಟ್ಟು ಕುಟುಂಬದ ಬಗ್ಗೆ ಎಷ್ಟು ಆಸ್ತಿಗಳು ಇದ್ದವು ಎಂದು ಪ್ರಶ್ನಿಸಿಲಾಗಿ ಸಾಕ್ಷಿಯು 15 ಎಕರೆ ಇದ್ದವರು ಎಂದು ನುಡಿಯುತ್ತಾರೆ. 01 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಭಾಗ ಆಗಿದ್ದರು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.